**All India Radio: Bangalore**
**National Bulletin In Kannada**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**03.02.2025 07.35 a.m.**
**<><><><>**

ಮುಖ್ಯಾಂಶಗಳು

1. ಭಾರತ ವಿರೋಧಿ ಧೋರಣೆಯನ್ನು ಸಮರ್ಥವಾಗಿ ಎದುರಿಸುವಂತೆ ಯುವಕರಿಗೆ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಕರೆ
2. ಲೋಕಸಭೆಯಲ್ಲಿಂದು ವಕ್ಫ್ ತಿದ್ದುಪಡಿ ಮಸೂದೆ ಕುರಿತ ಜಂಟಿ ಸಂಸದೀಯ ಸಮಿತಿಯ ವರದಿ ಮಂಡನೆ
3. ದೆಹಲಿ ವಿಧಾನಸಭಾ ಚುನಾವಣೆ ; ಬಹಿರಂಗ ಪ್ರಚಾರಕ್ಕೆ ಇಂದು ತೆರೆ
4. ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ; ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ೧೫೦ ರನ್ ಭರ್ಜರಿ ಜಯ

<><><><>

ಒಂದು ರಾಷ್ಟ್ರ ಲಕ್ಷಾಂತರ ಅಕ್ರಮ ವಲಸಿಗರನ್ನು ಹೊಂದಲು ಸಾಧ್ಯವಿಲ್ಲ ಮತ್ತು ಜನಸಂಖ್ಯಾ ಬದಲಾವಣೆಗಳಿಂದ ಚುನಾವಣಾ ರಾಜಕೀಯದ ಮೇಲೆ ಪ್ರಭಾವ ಬೀರಲು ಬಿಡಬಾರದು ಎಂದು ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಹೇಳಿದ್ದಾರೆ. ದೆಹಲಿಯಲ್ಲಿ ನಿನ್ನೆ ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ-ಐಸಿಎಐ ಆಯೋಜಿಸಿದ್ದ ಜಾಗತಿಕ ಲೆಕ್ಕಪರಿಶೋಧಕರ ವೇದಿಕೆ- ಡಬ್ಲ್ಯೂಒಎಫ್‌ಎ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದ ಅವರು, ಅಸ್ತಿತ್ವದ ಸವಾಲುಗಳ ಬಗ್ಗೆ ಯುವಕರು ಕಾಳಜಿ ವಹಿಸಬೇಕು. ಕೆಲವು ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ದೇಶದ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಬಗ್ಗೆ ಅಸಮಾಧಾನವಿದೆ. ಇಂತಹ ದೇಶದ ಪ್ರಗತಿಗೆ ತೊಡಕು ಉಂಟುಮಾಡುವ, ರಾಷ್ಟ್ರ ವಿರೋಧಿ ಚಟುವಟಿಕೆಗಳನ್ನು ಹಿಮ್ಮೆಟ್ಟಿಸುವ ಸಾಮರ್ಥ್ಯ ಯುವಕರಿಗಿದೆ ಎಂದು ಹೇಳಿದರು. ಭಾರತೀಯ ಆರ್ಥಿಕತೆಗೆ ಪ್ರಯೋಜನಕಾರಿಯಾದ ಆರ್ಥಿಕ ರಾಷ್ಟ್ರೀಯತೆಯ ಮನೋಭಾವ ಅಳವಡಿಸಿಕೊಳ್ಳುವ ಅವಶ್ಯಕತೆಯಿದೆ ಎಂದು ಉಪರಾಷ್ಟ್ರಪತಿ ಒತ್ತಿ ಹೇಳಿದರು.

ಧ್ವನಿ : ಜಗದೀಪ್ ಧನ್‌ಕರ್ (೪೨ ಸೆಕೆಂಡ್ಸ್)

<><><><>

೨೦೨೪ ರ ವಕ್ಫ್ ತಿದ್ದುಪಡಿ ಮಸೂದೆಯ ಜಂಟಿ ಸಮಿತಿಯ ವರದಿಯನ್ನು ಇಂದು ಲೋಕಸಭೆಯಲ್ಲಿ ಮಂಡಿಸಲಾಗುವುದು. ವಕ್ಫ್ ತಿದ್ದುಪಡಿ ಮಸೂದೆಯ ಜಂಟಿ ಸಂಸದೀಯ ಸಮಿತಿಯ ಅಧ್ಯಕ್ಷ ಜಗದಾಂಬಿಕಾ ಪಾಲ್, ಬಿಜೆಪಿ ಸಂಸದ ಸಂಜಯ್ ಜೈಸ್ವಾಲ್ ಅವರೊಂದಿಗೆ, ೨೦೨೪ ರ ವಕ್ಫ್ ತಿದ್ದುಪಡಿ ಮಸೂದೆಯ ಜಂಟಿ ಸಮಿತಿಯ ವರದಿಯನ್ನು ಮಂಡಿಸಲಿದ್ದಾರೆ. ಇದೇ ವೇಳೆ ಅವರು ಜಂಟಿ ಸಮಿತಿಯ ಮುಂದೆ ನೀಡಲಾದ ಸಾಕ್ಷ್ಯಗಳ ದಾಖಲೆಯನ್ನು ಸಹ ಮಂಡಿಸಲಿದ್ದಾರೆ. ಈ ವರದಿಯನ್ನು ಜನವರಿ ೩೦ ರಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪ್ರಸ್ತುತಪಡಿಸಲಾಯಿತು. ವಕ್ಫ್ ತಿದ್ದುಪಡಿ ಮಸೂದೆಯ ಕುರಿತಾದ ಜೆಪಿಸಿ ಕರಡು ವರದಿ ಮತ್ತು ತಿದ್ದುಪಡಿ ಮಾಡಿದ ಪರಿಷ್ಕೃತ ಮಸೂದೆಯನ್ನು ಜನವರಿ ೨೯ ರಂದು ಅಂಗೀಕರಿಸಿತು. ಆದಾಗ್ಯೂ, ವಿರೋಧ ಪಕ್ಷದ ನಾಯಕರು ವರದಿಯ ಬಗ್ಗೆ ತಮ್ಮ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜೆಪಿಸಿ ಈ ಹಿಂದೆ ೧೯೯೫ ರ ವಕ್ಫ್ ಮಸೂದೆಯನ್ನು ೧೪ ಕ್ಲಾಜ್ ಮತ್ತು ಸೆಕ್ಷನ್‌ಗಳಲ್ಲಿ ೨೫ ತಿದ್ದುಪಡಿಗಳೊಂದಿಗೆ ಅಂಗೀಕರಿಸಿತು. ಸಂಸತ್ತಿನ ಬಜೆಟ್ ಅಧಿವೇಶನ ಜನವರಿ ೩೧ ರಂದು ಪ್ರಾರಂಭವಾಗಿದ್ದು, ಏಪ್ರಿಲ್ ೪ ರವರೆಗೆ ನಡೆಯಲಿದೆ.

<><><><>

ಕಾಂಗೊದ ಅತಿದೊಡ್ಡ ನಗರ ಗೊಮ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ಬಂಡುಕೋರರ ರುವಾಂಡ ಬೆಂಬಲಿತ  ಎಂ-೨೩ ಬಂಡುಕೋರರ ಹೋರಾಟದ ನಡುವೆ ಕಳೆದ ಒಂದು ವಾರದಲ್ಲಿ ಕನಿಷ್ಠ ೭೭೩ ಜನರ ಹತ್ಯೆ ಮಾಡಲಾಗಿದೆ. ಒಂದು ದಶಕಕ್ಕೂ ಹೆಚ್ಚಿನ ಕಾಲದ ಈ ಹೋರಾಟದ ಭಾಗವಾಗಿ ಬಂಡುಕೋರರು ಗೊಮ ನಗರವನ್ನು ವಶಪಡಿಸಿಕೊಂಡಿದ್ದಾರೆ. ಕಾಂಗೊ ಸರ್ಕಾರದ ವಕ್ತಾರ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದು, ರಾಜಧಾನಿ ಕಿನ್‌ಶಾಸಾದಲ್ಲಿ ಮೃತರ ಸಂಖ್ಯೆ ಇನ್ನು ಹೆಚ್ಚಿರಬಹುದೆಂದು ಶಂಕಿಸಲಾಗಿದೆ ಎಂದಿದ್ದಾರೆ. ವಿಶ್ವ ಸಂಸ್ಥೆಯ ತಜ್ಞರ ಪ್ರಕಾರ ಎಂ-೨೩ ೧೦೦ಕ್ಕೂ ಹೆಚ್ಚು ಸಶಸ್ತ್ರ ಗುಂಪುಗಳನ್ನು ಹೊಂದಿರುವ ಹಾಗೂ ಪೂರ್ವ ಪ್ರದೇಶವನ್ನು ನಿಯಂತ್ರಿಸಲು ಬಯಸುವ ಸಂಘಟನೆಯಾಗಿದೆ. ಈ ಸಂಘಟನೆಗೆ ನೆರೆ-ಹೊರೆಯ ರುವಾಂಡದಿಂದ ೪ ಸಾವಿರ ಪಡೆಗಳ ಬೆಂಬಲ ದೊರೆಯುತ್ತಿದೆ. ಹಿಂಸಾಚಾರದ ಬೆನ್ನಲ್ಲೇ ಕಿನ್‌ಶಾಸಾದಲ್ಲಿರುವ ಭಾರತೀಯ ರಾಯಭಾರ ಕಚೇರಿ ಕಾಂಗೊದ ಬುಕಾವುದಲ್ಲಿ ನೆಲೆಸಿರುವ ಎಲ್ಲ ಭಾರತೀಯರಿಗೆ ತಕ್ಷಣ ವಿಮಾನ ಅಥವಾ ಇನ್ನು ಲಭ್ಯವಿರುವ ಯಾವುದೇ ಇತರೆ ವಿಧಾನಗಳ ಮೂಲಕ ಸುರಕ್ಷಿತ

ಸ್ಥಳಕ್ಕೆ ತೆರಳುವಂತೆ ತಿಳಿಸಿದೆ ಹಾಗೂ ಬಕುವಾಗೆ ಯಾವುದೇ ಪ್ರಯಾಣ ನಿಷೇಧಿಸುವಂತೆ ಸಲಹೆ ನೀಡಿದೆ. ಭಾರತೀಯ ನಾಗರಿಕರು ತಮ್ಮೊಂದಿಗೆ ಅಗತ್ಯ ಗುರುತು ಮತ್ತು ಪ್ರಯಾಣ ದಾಖಲೆಗಳು ಸೇರಿದಂತೆ ಅಗತ್ಯ ಔಷಧಿ, ಬಟ್ಟೆಗಳನ್ನು ಇಟ್ಟುಕೊಳ್ಳುವಂತೆ ಸಲಹೆ ನೀಡಿದೆ. ಯಾವುದೇ ಮಾಹಿತಿ ಅಥವಾ ತುರ್ತು ಸಂದರ್ಭದಲ್ಲಿ ರಾಯಭಾರಿ ಕಚೇರಿಯನ್ನು +೨೪೩ ೮೯೦೦೨೪೩೧೩ ಗೆ ಸಂಪರ್ಕಿಸಬಹುದು ಎಂದು ರಾಯಭಾರಿ ಕಚೇರಿ ತಿಳಿಸಿದೆ.

<><><><>

ದೆಹಲಿ ವಿಧಾನಸಭಾ ಚುನಾವಣೆ ಬಹಿರಂಗ ಪ್ರಚಾರಕ್ಕೆ ಇಂದು ಕೊನೆಯ ದಿನವಾಗಿದೆ. ಬಿಜೆಪಿ, ಕಾಂಗ್ರೆಸ್, ಆಮ್ ಆದ್ಮಿ ಪಕ್ಷಗಳು ನಾಯಕರು ಹಾಗೂ ತಾರಾ ಪ್ರಚಾರಕರು ರೋಡ್ ಶೋ, ಮನೆ ಮನೆ ಪ್ರಚಾರ ಮತ್ತು ಸಾರ್ವಜನಿಕ ಸಭೆಗಳ ಮೂಲಕ ಮತದಾರರ ಮನವೊಲಿಕೆಗೆ ಸರ್ವ ಪ್ರಯತ್ನದಲ್ಲಿ ತೊಡಗಿದ್ದಾರೆ. ೭೦ ಸದಸ್ಯ ಬಲದ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ೬೯೯ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ನಾಡಿದ್ದು, ಇದೇ ೫ ರಂದು ಮತದಾನ ನಡೆಯಲಿದೆ. ಇದೇ ೮ ರಂದು ಮತ ಎಣಿಕೆ ನಡೆಯಲಿದೆ.

ಈ ಕುರಿತು ಒಂದು ವರದಿ : ಅಭಯ್ (೪೦ ಸೆಕೆಂಡ್ಸ್)

ದೆಹಲಿ ವಿಧಾನಸಭಾ ಚುನಾವಣೆ ಬಿಜೆಪಿ, ಕಾಂಗ್ರೆಸ್, ಆಮ್ ಆದ್ಮಿ ಪಕ್ಷಗಳ ನಡುವೆ ತ್ರಿಕೋನ ಸ್ಪರ್ಧೆಗೆ ಸಾಕ್ಷಿಯಾಗುತ್ತದೆ. ಒಂದು ಕೋಟಿ ೫೬ ಲಕ್ಷಕ್ಕೂ ಹೆಚ್ಚಿನ ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದು, ಅಭ್ಯರ್ಥಿಗಳ ಚುನಾವಣಾ ಭವಿಷ್ಯ ನಿರ್ಧರಿಸಲಿದ್ದಾರೆ. ರಾಷ್ಟ್ರ ರಾಜಧಾನಿಯಲ್ಲಿ ೧೩ ಸಾವಿರದ ೭೬೦ ಮತಗಟ್ಟೆಗಳಲ್ಲಿ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಮತದಾರ ಸ್ನೇಹಿ ಚುನಾವಣೆಗಾಗಿ ಚುನಾವಣಾ ಆಯೋಗ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಸುಗಮ ಹಾಗೂ ತ್ವರಿತ ಮತದಾನ ಅನುಭವಕ್ಕಾಗಿ ಸರತಿ ನಿರ್ವಹಣ ಪರಿಹಾರ - ಕ್ಯೂಎಂಎಸ್ ಆಪ್ ಬಿಡುಗಡೆಗೊಳಿಸಲಾಗಿದೆ. ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ೩೫ ಸಾವಿರಕ್ಕೂ ಹೆಚ್ಚಿನ ದೆಹಲಿ ಪೊಲೀಸ್ ಸಿಬ್ಬಂದಿ ೧೯ ಸಾವಿರ ಹೋಂಗಾರ್ಡ್ಸ್, ೨೨೦ ಸಿಎಪಿಎಫ್ ತುಕಡಿಗಳನ್ನು ಚುನಾವಣಾ ದಿನದಂದು ನಿಯೋಜಿಸಲಾಗುತ್ತಿದೆ.

<><><><>

ಮುಂಬೈನ್ ವಾಂಖೆಡೆ ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಅಂತಾರಾಷ್ಟ್ರೀಯ ಟಿ-೨೦ ಸರಣಿಯ ೫ನೇ ಹಾಗೂ ಅಂತಿಮ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಭಾರತ ೧೫೦ ರನ್‌ಗಳ ಭರ್ಜರಿ ಜಯ ದಾಖಲಿಸಿದೆ. ಆ ಮೂಲಕ ೫ ಪಂದ್ಯಗಳ ಸರಣಿಯನ್ನು ೪-೧ ರ ಅಂತರದಲ್ಲಿ ವಶಪಡಿಸಿಕೊಂಡಿದೆ. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ ೨೦ ಓವರ್‌ಗಳಲ್ಲಿ ೯ ವಿಕೆಟ್ ನಷ್ಟಕ್ಕೆ ೨೪೭ ರನ್ ಗಳಿಸಿತು. ೫೪ ಎಸೆತಗಳಲ್ಲಿ ೧೩೫ ರನ್‌ನೊಂದಿಗೆ ಆಕರ್ಷಕ ಶತಕ ಸಿಡಿಸಿದ ಅಭಿಷೇಕ್ ಶರ್ಮ ೧೩ ಸಿಕ್ಸ್‌ರ್‌ಗಳೊಂದಿಗೆ ಅಂತಾರಾಷ್ಟ್ರೀಯ ಟಿ-೨೦ ಇನ್ನಿಂಗ್ಸ್ ವೊಂದರಲ್ಲಿ ಅತಿ ಹೆಚ್ಚು ಸಿಕ್ಸರ್ ಸಿಡಿಸಿದ ಭಾರತೀಯ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ೨೪೮ ರನ್ ಗುರಿ ಬೆನ್ನತ್ತಿದ ಇಂಗ್ಲೆಂಡ್ ೧೦.೩ ಓವರ್‌ಗಳಲ್ಲಿ ತನ್ನೆಲ್ಲ ವಿಕೆಟ್ ಕಳೆದುಕೊಂಡು ೯೭ ರನ್ ಗಳಿಸಲಷ್ಟೆ ಶಕ್ತವಾಯಿತು. ಭಾರತದ ಪರ ಮೊಹಮ್ಮದ್ ಶಮಿ ೩ ವಿಕೆಟ್ ಕಬಳಿಸಿದರೆ, ವರುಣ್ ಚಕ್ರವರ್ತಿ, ಶಿವಂದುಬೆ ಮತ್ತು ಅಭಿಷೇಕ್ ಶರ್ಮ ತಲಾ ೨ ವಿಕೆಟ್ ಹಾಗೂ ರವಿ ಬಿಷ್ಣೋಯ್ ೧ ವಿಕೆಟ್ ಪಡೆದರು. ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ತೋರಿದ ಅಭಿಷೇಕ್ ಶರ್ಮಗೆ ಪಂದ್ಯ ಶ್ರೇಷ್ಠ ಪ್ರಶಸ್ತಿ ಹಾಗೂ ವರುಣ್ ಚಕ್ರವರ್ತಿ ಅವರಿಗೆ ಸರಣಿ ಶ್ರೇಷ್ಠ ಪ್ರಶಸ್ತಿ ನೀಡಲಾಯಿತು.

<><><><>

ಡೆಹ್ರಾಡೂನ್‌ನಲ್ಲಿ ನಡೆಯುತ್ತಿರುವ ೩೮ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಕ್ರೀಡಾಪಟುಗಳ ಅತ್ಯುತ್ತಮ ಪ್ರದರ್ಶನ ಮುಂದುವರೆದಿದ್ದು, ಹೊಸ ರಾಷ್ಟ್ರೀಯ ದಾಖಲೆಗಳು ಸೃಷ್ಟಿಯಾಗಿದೆ. ಭಾರತೀಯ ವಿಶೇಷವಾಗಿ ವೇಟ್‌ಲಿಫ್ಟಿಂಗ್ ಮತ್ತು ಶೂಟಿಂಗ್‌ನಲ್ಲಿ ಕ್ರೀಡಾಪಟುಗಳು ಗಮನಾರ್ಹ ಪ್ರದರ್ಶನ ನೀಡಿದರು.

ಈ ಕುರಿತು ಒಂದು ವರದಿ : ಅಭಯ್ (೪೩ ಸೆಕೆಂಡ್ಸ್)

ಡೆಹ್ರಾಡೂನ್‌ನಲ್ಲಿ ನಡೆಯುತ್ತಿರುವ ೩೮ ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಸ್ಪರ್ಧಿಸುತ್ತಿರುವ ಕ್ರೀಡಾಪಟುಗಳು ತಮ್ಮ ಗಮನಾರ್ಹ ಪ್ರದರ್ಶನದೊಂದಿಗೆ ನಿರಂತರವಾಗಿ ದಾಖಲೆಗಳನ್ನು ಮುರಿಯುತ್ತಿದ್ದಾರೆ. ಮಹಾರಾಷ್ಟ್ರದ ವೈಶವ್ ಶಹಾಜಿ ಠಾಕೂರ್ ಪುರುಷರ ೧೦೨ ಕೆಜಿ ವೇಟ್‌ಲಿಫ್ಟಿಂಗ್ ವಿಭಾಗದಲ್ಲಿ ಸ್ನ್ಯಾಚ್ ಸ್ಪರ್ಧೆಯಲ್ಲಿ ೧೬೦ ಕೆಜಿ ಎತ್ತುವ ಮೂಲಕ ಹೊಸ ರಾಷ್ಟ್ರೀಯ ದಾಖಲೆಯನ್ನು ಸ್ಥಾಪಿಸಿದರು. ಏತನ್ಮಧ್ಯೆ, ಮಧ್ಯಪ್ರದೇಶದ ಆಶಿ ಚೌಕ್ಸೆ ಮಹಿಳೆಯರ ೫೦ ಮೀಟರ್ ರೈಫಲ್ ೩ ಪೊಸಿಷನ್ಸ್ ಸ್ಪರ್ಧೆಯಲ್ಲಿ ೫೯೮ ಅಂಕಗಳನ್ನು ಗಳಿಸುವ ಮೂಲಕ ಹೊಸ ರಾಷ್ಟ್ರೀಯ

ದಾಖಲೆಯನ್ನು ಸೃಷ್ಟಿಸಿದರು. ವೇಟ್‌ಲಿಫ್ಟಿಂಗ್‌ನ ಮಹಿಳೆಯರ ೮೧ ಕೆಜಿ ವಿಭಾಗದಲ್ಲಿ ಚಂಡೀಗಢದ ವಂಶಿತಾ ವರ್ಮಾ ಒಟ್ಟು ೨೦೮ ಕೆಜಿ ಎತ್ತುವ ಮೂಲಕ ಚಿನ್ನ ಗೆದ್ದರು. ೮೭ ಕೆಜಿ ವಿಭಾಗದಲ್ಲಿ, ತಮಿಳುನಾಡಿನ ಅರೋಕಿಯಾ ಅಲಿಶ್ ಒಟ್ಟು ೨೨೧ ಕೆಜಿ ಎತ್ತುವ ಮೂಲಕ ಚಿನ್ನದ ಪದಕ ಗೆದ್ದರು. ಕರ್ನಾಟಕದ ಉಷಾ ೧೯೭ ಕೆಜಿ ಭಾರ ಎತ್ತುವ ಮೂಲಕ ಕಂಚಿನ ಪದಕ ಪಡೆದರು. ಪುರುಷರ ೧೦೨ ಕೆಜಿ ವಿಭಾಗದಲ್ಲಿ, ಮಹಾರಾಷ್ಟ್ರದ ವೈಶವ್ ಶಹಾಜಿ ಠಾಕೂರ್ ಅದ್ಭುತ ಪ್ರದರ್ಶನ ನೀಡಿ, ೧೬೦ ಕೆಜಿ ಸ್ನ್ಯಾಚ್ ಎತ್ತುವ ಮೂಲಕ ರಾಷ್ಟ್ರೀಯ ದಾಖಲೆಯನ್ನು ಮುರಿದರು. ಪುರುಷರ ೧೦೯ ಕೆಜಿ ವಿಭಾಗದಲ್ಲಿ, ರಾಜಸ್ಥಾನದ ಹರ್ಚರಣ್ ಸಿಂಗ್ ಒಟ್ಟು ೩೪೭ ಕೆಜಿ ಎತ್ತಿ ಚಿನ್ನದ ಪದಕವನ್ನು ಗೆದ್ದರು. ಈ ಮಧ್ಯೆ, ೩೮ ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಮಹಿಳೆಯರ ವಾಲಿಬಾಲ್ ಸ್ಪರ್ಧೆಯಲ್ಲಿ ಕೇರಳ ಚಿನ್ನದ ಪದಕವನ್ನು ಪಡೆದುಕೊಂಡಿತು. ರುದ್ರಪುರದ ಮನೋಜ್ ಸರ್ಕಾರ್ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ, ಕೇರಳ ತಂಡ ತಮಿಳುನಾಡನ್ನು ೩-೨ ಅಂತರದಿಂದ ಸೋಲಿಸಿತು. ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಮೊದಲ ಬಾರಿಗೆ ನಡೆದ ಯೋಗ ಸ್ಪರ್ಧೆಯಲ್ಲಿ, ಛತ್ತೀಸ್‌ಗಢ ಮತ್ತು ಉತ್ತರ ಪ್ರದೇಶ ಚಿನ್ನದ ಪದಕಗಳನ್ನು ಗೆದ್ದವು ಪದಕ ಪಟ್ಟಿಯಲ್ಲಿ, ಸರ್ವೀಸಸ್ ೧೭ ಚಿನ್ನದ ಪದಕಗಳೊಂದಿಗೆ ಅಗ್ರಸ್ಥಾನದಲ್ಲಿದೆ, ನಂತರ ಕರ್ನಾಟಕ ೧೫ ಚಿನ್ನದ ಪದಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ.

<><><><>

ಚೆಸ್‌ನಲ್ಲಿ, ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಪ್ರತಿಷ್ಠಿತ ಟಾಟಾ ಸ್ಟೀಲ್ ಮಾಸ್ಟರ್ಸ್ ೨೦೨೫ ಪ್ರಶಸ್ತಿಯನ್ನು ರೋಮಾಂಚಕ ಹಣಾಹಣಿಯಲ್ಲಿ ಗೆದ್ದರು, ನಿನ್ನೆ ರಾತ್ರಿ ನೆದರ್‌ಲ್ಯಾಂಡ್ಸ್‌ನ ವಿಜ್ಕ್ ಆನ್ ಜೀಯಲ್ಲಿ ನಡೆದ ಟೈ ಬ್ರೇಕರ್ ಪಂದ್ಯದಲ್ಲಿ ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರನ್ನು ಸೋಲಿಸಿದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>